


ಒಂದುಊರಲ್ಲಿ ಒಂದು ಮನೆ ,ಆ ಮನೆಯ ಹೊರಗೆ ದಾಸು ಮತ್ತುಒಳಗೆ ಪಾರು ಎಂಬ ನಾಯಿ ಹಾಗು ಬೆಕ್ಕು ..
ಕುಟುಂಬದ ಮನೆಯಲ್ಲಿ ನಡೆಯುವ ಕಾರ್ಯಕ್ರಮಕ್ಕಾಗಿ ಮನೆಯ ಯಜಮಾನರು ಸಂಸಾರ ಸಮೇತರಾಗಿ ತರವಾಡಿನ ಮನೆಗೆ ತೆರಳಿದರು. ಮನೆಯೊಳಗೆ ಮೌನ ಆವರಿಸಿತು. ಆ ರಾತ್ರಿ ಆಕಾಶದಲ್ಲಿ ಮೋಡಗಳು ಕವಿದು, ಹಗುರಾದ ಮಳೆ ಮೌನವಾಗಿ ಸುರಿಯುತ್ತಿತ್ತು. ಮನೆಯ ಹೊರಗಡೆ ಸದಾ ಜಾಗರೂಕನಾಗಿ ಮನೆ ಕಾಯುತ್ತಿದ್ದ ದಾಸು ನಾಯಿ, ಯಾವತ್ತಿನಂತೆ ಕಣ್ಣಿಗೆ ಎಣ್ಣೆ ಬಿಟ್ಟುಕೊಂಡು ಮನೆ ಕಾಯುತ್ತಾ ಮಲಗಿರುವ ದಾಸು ನಾಯಿಗೆ,

ಧಡಾಮ್!
ಮಧ್ಯರಾತ್ರಿಯ ವೇಳೆಯಲ್ಲಿ ಏಕಾಏಕಿ ನೆಲ ಬಿರಿಯುವಂತೆ ಭಾಸವಾಗುವ ಭಯಾನಕ ಶಬ್ದ ಕೇಳಿಸುತ್ತದೆ
ನೆಲವೇ ಬಿರುಕು ಬಿಟ್ಟಂತೆ ಭಾಸವಾಗುವ ಭಯಾನಕ ಶಬ್ದ ಕೇಳಿಸಿತು.
ಆ ಶಬ್ದಕ್ಕೆ ಬೆಚ್ಚಿಬಿದ್ದ ದಾಸು ನಾಯಿ, “ಅಯ್ಯೋ! ಮನೆಗೆ ಏನಾದರೂ ಅಪಾಯ ಬಂದಿತೇ?” ಎಂದು ಗಾಬರಿಗೊಂಡಿತು. ಮನೆಯ ಸುರಕ್ಷತೆ ಅದರ ಹೊಣೆ. ತಕ್ಷಣವೇ ಮನೆಯೊಳಗೆ ಸುಖವಾಗಿ ಮಲಗಿದ್ದ ಬೆಕ್ಕನ್ನು ಕರೆದು ಕೇಳಬೇಕೆಂದು ನಿರ್ಧರಿಸಿತು.
“ಪಾರಕ್ಕಾ... ಓ ಪಾರಕ್ಕಾ...” ಎಂದು ಮೃದುವಾಗಿ ಕರೆಯಿತು.
“ಮನೆಯೊಳಗೆ ದೊಡ್ಡ ಶಬ್ದ ಆಯಿತಲ್ಲಾ. ಏನಾದರೂ ತೊಂದರೆ ಇದೆಯೇ? ಯಜಮಾನರು ಇದ್ದರೆ ನಾನೇನು ಇಷ್ಟೊಂದು ಚಿಂತಿಸಬೇಕಿರಲಿಲ್ಲ. ಸ್ವಲ್ಪ ಹೋಗಿ ನೋಡಿ ಹೇಳ್ತೀಯಾ?” ಎಂದು ವಿನಯದಿಂದ ಕೇಳಿತು.

ಆ ವೇಳೆಗೆ ಯಾವಾಗಲೂ ಆರಾಮವಾಗಿ ಸಿಹಿ ತಿಂದು ಬೆಚ್ಚಗೆ ಮಲಗುತ್ತಿದ್ದ ಬೆಕ್ಕು, ನಿಧಾನವಾಗಿ ಎದ್ದು ಮನೆಯೊಳಗೆ ಸುತ್ತಿ ಬಂತು. ಗಾಳಿಗೆ ಹಲಗೆಯ ಮೇಲೆ ಇಟ್ಟಿದ್ದ ಸಾಸಿಮಿ ಬಿದ್ದು ಶಬ್ದ ಮಾಡಿದ್ದನ್ನು ನೋಡಿ, “ಅಯ್ಯೋ! ಇದಕ್ಕೇ ಇಷ್ಟೊಂದು ಗಾಬರಿಯೇ?” ಎಂದು ನಕ್ಕಿತು.
“ಅಗತ್ಯಕ್ಕಿಂತ ಹೆಚ್ಚಾಗಿ ತಲೆ ಬಿಸಿ ಮಾಡಬೇಡ. ಎಲ್ಲವೂ ಸರಿ ಇದೆ. ನೀನು ಮಲಗು” ಎಂದು ಹೇಳಿ, ಮತ್ತೆ ನಿದ್ರೆಗೆ ಜಾರಿತು.
ಆದರೆ ಮನೆಯ ಜವಾಬ್ದಾರಿಯನ್ನು ತನ್ನ ಹೆಗಲ ಮೇಲೆ ಹೊತ್ತಿದ್ದ ದಾಸು ನಾಯಿಗೆ ನಿದ್ದೆ ಬರಲಿಲ್ಲ. ಅದು ಎಡಬಿಡದೆ ಹೊರಳಾಡುತ್ತಾ,

ಬಾಯಿ ಆಕಳಿಸುತ್ತಾ, ಮತ್ತೆ ಬೆಕ್ಕನ್ನು ಕರೆಯಿತು.
“ಪಾರಕ್ಕಾ... ಓ ಪಾರಕ್ಕಾ...”
“ಏನು ಮರಾಯ, ಮತ್ತೆ ಏನಿದು ಕಿರಿ ಕಿರಿ?” ಎಂದು ಬೆಕ್ಕು ಬೇಸರದಿಂದ ಕೇಳಿತು.
“ಈ ಸಲದ ಅಷ್ಟಮಿ ಹಬ್ಬ ಯಾವಾಗ ಬರುತ್ತದೆ?” ಎಂದು ನಾಯಿ ಕೇಳಿತು.
ಇದನ್ನು ಕೇಳಿದ ಬೆಕ್ಕಿಗೆ ಸಿಟ್ಟು ಬಂತು. ಮೊದಲಿನಿಂದಲೂ ಬೆಕ್ಕಿಗೆ ದಾಸು ನಾಯಿಯೆಂದರೆ ವಿಶೇಷ ಗೌರವವೇ ಇರಲಿಲ್ಲ.
“ಎಂಜಲು ತಿನ್ನುವ ನಿನಗೆ ಅಷ್ಟಮಿ ಆದರೇನು, ಬೇರೆ ಹಬ್ಬ ಆದರೇನು? ನಿನಗೆ ಸಿಕ್ಕೋದು ಮಾತ್ರ ಸಿಗೋದೇ. ಇಷ್ಟು ರಾತ್ರಿ ನಿದ್ದೆ ಮಾಡಲೂ ಬಿಡೋದಿಲ್ಲ!” ಎಂದು ಗರಂ ಆಗಿ ಹೇಳಿ, ಕಲೆಂಬಿಯ ಮೇಲೆ ಹತ್ತಿ ಮಲಗಿತು.
ನಾಯಿಗೆ ಅದು ತಣ್ಣೀರು ಎರಚಿದಂತೆ ಅನಿಸಿತು. “ನಾನು ಇಷ್ಟು ಕೀಳಾದವನಾ? ಮನೆ ಕಾಯೋದು ತಪ್ಪಾ?” ಎಂದು ಮನಸ್ಸಿನೊಳಗೆ ಬೇಸರಿಸಿಕೊಂಡಿತು.
ಆದರೂ ಕರ್ತವ್ಯ ಮರೆಯದೆ, ತನ್ನ ಕಿವಿಯನ್ನು ಕೈಯ ಮೇಲೆ ಇಟ್ಟು, ಮತ್ತೆ ಎಚ್ಚರದಿಂದ ಮನೆ ಕಾಯಲು ಕುಳಿತುಕೊಂಡಿತು.
ಬೆಕ್ಕು ಕಲೆಂಬಿಯ ಮೇಲೆ ಆರಾಮವಾಗಿ ನಿದ್ರಿಸಿತು. ನಾಯಿ ಮಾತ್ರ ಜಾಗರೂಕತೆಯಿಂದ ರಾತ್ರಿಯಿಡೀ ಮನೆ ಕಾಯುತ್ತಿತ್ತು.
ನೀತಿ:
ಯಾರೇ ಆಗಲಿ, ಇತಿ ಮಿತಿಯೊಳಗೇ ವರ್ತಿಸಬೇಕು. ಇಲ್ಲದಿದ್ದರೆ ಅವಮಾನವನ್ನು ಸಹಿಸಿಕೊಳ್ಳಬೇಕಾಗುತ್ತದೆ.